(ಶ್ರೀ ವೀರೇಂದ್ರ ಪಾಟೀಲ್)

ಇನ್ನು ರಿಸೋರ್ಸಸ್ ಸಮಿತಿಯನ್ನು ಏತಕ್ಕೆ ನೇಮಕಮಾಡಲಾಯಿತೆಂಬುದನ್ನಾಗಲೇ ಹೇಳಿದ್ದೇನೆ. ಹಣದ ಅನುಕೂಲತೆ ದೊರೆತರೆ ಸರ್ಕಾರ ಈ ಕಾಮಗಾರಿಯನ್ನು 1974ರವರೆಗೂ ನಿಲ್ಲಿಸದೆ ಇದನ್ನು 1972ರೊಳಗೇ ಮುಗಿಸಬೇಕೆಂದು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಅದು ಸಾಧ್ಯವಾಗಬಹುದು ಎಂಬ ಆಸೆ ನನಗಿದೆ.

Rural Industries Project Scheme in Tumkur District

296. **Sri G. T. GOVINDA REDDY** (Madhugiri).—

Will the Minister for Industries, Information and Publicity be pleased to state :—

(*a*) the taluks of Tumkur District that have come under the jurisdiction of Rural Industrial Project Scheme ;

(*b*) whether the Central Government will be compelled to make the project applicable to the entire district ?

Sri A. P. APPANNA (Deputy Minister for Industries).—

(*a*) Tumkur and Gubbi Taluks.

(*b*) Year after year the amount of grant from the Central Government is decreasing. As such, in the present situation it is not possible to compel the Central Government to make the project scheme applicable to the entire Tumkur District.

ಶ್ರೀ ಜಿ. ಟಿ. ಗೋವಿಂದರೆಡ್ಡಿ.—ಈ ರೂರಲ್ ಇಂಡಸ್ಟ್ರಿಯಲ್ ಯೋಜನೆಯನ್ನು ನಮ್ಮ ಜಿಲ್ಲೆಯಲ್ಲಿ ಏಕೆ ಹೆಚ್ಚು ಹೆಚ್ಚು ವಿಸ್ತಾರ ಮಾಡುತ್ತಿಲ್ಲ?

ಶ್ರೀ ಎ. ಪಿ. ಅಪ್ಪಣ್ಣ.—ಕೇಂದ್ರ ಸರ್ಕಾರದಿಂದ ಬರತಕ್ಕ ಹಣ ದಿನದಿನಕ್ಕೂ ಕಡೆಮೆಯಾಗುತ್ತಿರುವುದರಿಂದ ಇದರ ವ್ಯಾಪ್ತಿಯನ್ನು ಹೆಚ್ಚುಮಾಡುತ್ತಿರುವುದನ್ನು ಕೈಬಿಡಲಾಗಿದೆ.

ಶ್ರೀ ಜಿ. ಟಿ. ಗೋವಿಂದರೆಡ್ಡಿ.—ತುಮಕೂರು ಜಿಲ್ಲೆಯಲ್ಲಿ ರೆಯಿನ್ ಫಾಲ್ಸ್ ಬಹಳ ಕಡಿಮೆಯಾಗಿರುವುದರಿಂದ ಗ್ರಾಮಾಂತರ ಕೈಗಾರಿಕೆಗಳನ್ನು ಅಲ್ಲಿ ಪ್ರಾರಂಭಮಾಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಎ. ಪಿ. ಅಪ್ಪಣ್ಣ.—1968-69ರಲ್ಲಿ ಮೈಸೂರು ರಾಜ್ಯದಲ್ಲಿ ಮೂರು ಪ್ರಾಜೆಕ್ಟ್‌ಗಳಿಗಾಗಿ ಕೇಂದ್ರ ಸರ್ಕಾರ ಕೊಟ್ಟ ಅಥ ಹಣ, 9 ಲಕ್ಷ 90 ಸಾವಿರ ರೂಪಾಯಿಗಳು. ಈ ವರ್ಷ 4 ಲಕ್ಷ 46 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದನ್ನು ಈಗ ಇರತಕ್ಕ ಪ್ರಾಜೆಕ್ಟ್ ಏರಿಯಾ ಯೋಜನೆಗಳಿಗೆ ಬೇಕೆಂದು ನಿಗದಿಮಾಡಿದ್ದೇವೆ. ಅದಕ್ಕೇ ಈ ಹಣ ಸಾಲದೆ ಇರುವುದರಿಂದ ಬೇರೆ ವ್ಯವಹಾರಕ್ಕೆ ಇದರಲ್ಲಿ ಹಣ ತೆಗೆಯಲು ಬಹಳ ಕಷ್ಟವಾಗುತ್ತದೆ.

Sri M. K. BOMME GOWDA.—What are the criteria to select places for these rural industries ?

Sri A. P. APPANNA.—The criteria for selection are certain directions given by the Planning Commission. There must be infra structure, communications, electricity and there must be scope for raw material in the rural areas and for providing employment in the industrial sector.

ಶ್ರೀ ಎಸ್. ಎ. ಅಗ್ನಿಹೋತ್ರಿ.—ಈಗ ಕೇಂದ್ರಸರ್ಕಾರದವರು ಹಣವನ್ನು ಹೆಚ್ಚಿಗೆ ಒದಗಿಸಿಲ್ಲ. ಕ್ಷೇತ್ರ ಏಸ್ತರಣೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತೀರಿ. ಈಗ ಕೊಟ್ಟಿರುವ ಹಣದಿಂದ ಈ ವರ್ಷ ಗ್ರಾಮಾಂತರ ಕೈಗಾರಿಕೆಗಳನ್ನು ಕಡಿಮೆ ಮಾಡಿದ್ದಾರೆ. ಅದಕ್ಕೆ ತಾವು ಏನು ಹೇಳುತ್ತೀರಿ ?

ಶ್ರೀ ಎ. ಪಿ. ಅಪ್ಪಣ್ಣ.—ಕಳೆದ ವರ್ಷ 9 ಲಕ್ಷ 90 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದರು. ಕೇಂದ್ರಸರ್ಕಾರ ಕೊಟ್ಟ ಹಣ ಮೈಸೂರು ರಾಜ್ಯದ ಮೂರು ಪ್ರಾಜೆಕ್ಟ್‌ಗಳಿಗೇ ಆಯಿತು. ಈ ವರ್ಷ 4 ಲಕ್ಷ 46 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಕಡಮೆಮಾಡಬೇಕಾಗಿದೆ.

ಶ್ರೀ ವಿ. ಎಲ್. ಶಿವಪ್ಪ. - ಇಂಡಿಯಾ ಸರ್ಕಾರದಿಂದ ಬರತಕ್ಕ ಹಣ ಹೆಚ್ಚು ಇಲ್ಲವೆಂದು ಹೇಳುತ್ತಾರೆ. ನಮ್ಮ ಜಿಲ್ಲೆಯಲ್ಲಿಯೂ ಮಳೆ ಕಡಿಮೆ ಬಿದ್ದಿದೆ. ಆದ್ದರಿಂದ ನಮ್ಮ ಜಿಲ್ಲೆಯೊಳಗೂ ಆ ರೀತಿ ಕೈಗಾರಿಕೆಗಳನ್ನು ಸ್ಥಾಪನೆಮಾಡುವುದಕ್ಕೆ ಅವಕಾಶಮಾಡಿಕೊಡುತ್ತೀರಾ ?

Sri A. P. APPANNA.—These are the rural projects which are completely financed by the Central Government. We cannot do that. We can think of some other schemes. If suggestions come we will consider that.

Wakf Board and the Member of its Sub-Committees

308. Sri A. R. PANCHAGAVI (Arabhavi).—

Will the Minister for Transport be pleased to state :—

(*a*) when the present Wakf Board for the State of Mysore was constituted ;

(*b*) the number of Sub-Committees and panels constituted by the Board and the period for which they were constituted and when ;

(*c*) the various Powers delegated to such panels and these powers were delegated ;

(*d*) whether any extension has been granted to any of these Committees and panels ;

(*e*) if so, when was such extension granted and by whom ;

(*f*) whether such extension was published in the manner prescribed ?

Sri MOHAMED ALI (Minister for Transport).—

(*a*) On 7th December 1966.

(*b*) Four Sub-Committees were constituted on 20th June 1969, on 25th November 1967, on 21st January 1969 and on 1st April 1969. No period has been specified nor any panel has been constituted in respect of 3 Sub-Committees. The 4th Sub-Committee has 2 penels and the period of that Committee was from 21st December1966 to 20th October 1967 and from 21st January 1969 to 31st March 1970.